# ನಿಮ್ಮೊಡನೆ

## ಪ್ರೇಮ ವಂಚನೆಗೆ ಕೊನೆಯೆಲ್ಲಿ?

ಈಗಿರುವ ಪೊಲೀಸ್ ವ್ಯವಸ್ಥೆಯಲ್ಲಿ ಅನ್ಯಾಯ ಅಥವಾ ದೌರ್ಜನ್ಯಕ್ಕೊಳಗಾದ ಹೆಣ್ಣುಮಕ್ಕಳು ನ್ಯಾಯ ದೊರಕಿಸಿಕೊಳ್ಳುವುದು ಸಾಧ್ಯವಿದೆಯೆ? ಮಹಿಳಾ ವಿಚಾರಗಳ ಬಗ್ಗೆ ಪೊಲೀಸ್ ಇಲಾಖೆಯ ನಿಷ್ಕ್ರಿಯತೆಗೆ ಪ್ರಿಯಾಂಕಾ ಪ್ರಕರಣದ ರಾದ್ಧಾಂತಕ್ಕಿಂತ ಸಾಕ್ಷಿ ಬೇಕೆ?

ಪ್ರೇಮ ನಿರಾಕರಿಸಿದ ಐಐಎಸ್‌ಸಿ ಸಂಶೋಧನಾ ವಿದ್ಯಾರ್ಥಿನಿಯ ಕೊಲೆ ಪ್ರಿಯಕರನಿಂದ. ಪ್ರೇಮದ ಬಲೆಗೆ ಸಿಲುಕಿದ ಎಂಬಿಎ ವಿದ್ಯಾರ್ಥಿನಿ ಪ್ರಿಯಾಂಕಾಗೆ ವಂಚನೆ ಪ್ರಿಯಕರನಿಂದ; ಆ ಪ್ರಿಯಕರ ಮದುವೆಯಾದ ಮತ್ತೊಬ್ಬಾಕೆಗೂ ಆಘಾತ. ಮದುವೆ ಸಂದರ್ಭದಲ್ಲಿ ಮದುವೆ ಮನೆಯಲ್ಲೇ ದೊಡ್ಡ ರಾದ್ಧಾಂತ..! ಹತ್ತು ಹಲವು ರೀತಿಗಳಲ್ಲಿ ಮಹಿಳೆ ವಿರುದ್ಧ ನಡೆಯುವ ಹಿಂಸೆ ಅಥವಾ ದೌರ್ಜನ್ಯದ ಸ್ವರೂಪಗಳ ಕೆಲವು ಉದಾಹರಣೆಗಳು ಇವು. ವಿಪರ್ಯಾಸವೆಂದರೆ, ನವೆಂಬರ್ 25ರಿಂದ ಡಿಸೆಂಬರ್ 9ರವರೆಗೆ ವಿಶ್ವದಾದ್ಯಂತ 15 ದಿನಗಳ ಕಾಲ 'ಮಹಿಳೆಯರ ವಿರುದ್ಧದ ಹಿಂಸಾಚಾರ ಪ್ರತಿಭಟಿಸುವ ಪಾಕ್ಷಿಕ' ಆಚರಿಸಲಾಗುತ್ತದೆ. ಈ ಸಂದರ್ಭದಲ್ಲೇ ಮಹಿಳೆ ವಿರುದ್ಧದ ಅಪರಾಧ ಪ್ರಕರಣಗಳೂ ದೊಡ್ಡ ರೀತಿಯಲ್ಲೇ ವರದಿಯಾಗಿರುವುದು ಕಾಕತಾಳೀಯ.

ಮನೆಯೊಳಗಿರಲಿ ಹೊರಗಿರಲಿ, ಮಹಿಳೆ ಹಿಂಸೆಯಿಂದ ಮುಕ್ತಳಲ್ಲ. ಕುಟುಂಬದೊಳಗಿನ ಹಿಂಸೆಗಳಂತೂ ಸೂಕ್ಷ್ಮವಾದದ್ದು. ಒಳಗೊಳಗೇ ಬೇಯುವ ಮೂಕವೇದನೆ ಅದು. ಈ ಮೂಕವೇದನೆಗಳಿಗೆ ಮಾತು ನೀಡುವ ಪ್ರಯತ್ನಗಳು ಅಲ್ಲಲ್ಲಿ ಈಚಿನ ದಿನಗಳಲ್ಲಿ ಆಗುತ್ತಿವೆ. ಆದರೆ ಇವನ್ನೂ ಪ್ರತಿರೋಧಿಸುವ ಪ್ರಯತ್ನಗಳೂ ನಡೆಯುತ್ತಿವೆ.

ಮಹಿಳೆ ವಿರುದ್ಧದ ಅತ್ಯಂತ ಹೀನ ಅಪರಾಧವಾದ ಅತ್ಯಾಚಾರ ಪ್ರಕರಣಗಳೂ ತೀವ್ರಗತಿಯಲ್ಲಿ ಹೆಚ್ಚಾಗುತ್ತಿವೆ. ಭಾರತದಲ್ಲಿ ಪ್ರತಿ 30 ನಿಮಿಷಗಳಿಗೊಮ್ಮೆ ಅತ್ಯಾಚಾರ ಪ್ರಕರಣಗಳು ವರದಿಯಾಗುತ್ತಿವೆ ಎಂಬುದು ಸಮೀಕ್ಷೆಯೊಂದರ ವರದಿ. ಇದು 1971ರ ನಂತರ ಸರಿಸುಮಾರು ಶೇ.700ರಷ್ಟು ಹೆಚ್ಚಳವನ್ನು ಸೂಚಿಸುತ್ತದೆ. ಸಾಮಾನ್ಯ ಅಪರಾಧಗಳಿಗಿಂತ ಮಹಿಳೆ ವಿರುದ್ಧದ ಅಪರಾಧ ಪ್ರಕರಣಗಳೂ ಹೆಚ್ಚಾಗುತ್ತಾ ಸಾಗುತ್ತಿರುವುದೂ ಇತ್ತೀಚಿನ ಬೆಳವಣಿಗೆ.

ಏಕೆ ಹೀಗೆ? ಈ ಬಗೆಯ ಅಪರಾಧಗಳು ಏನನ್ನು ಧ್ವನಿಸುತ್ತವೆ? ಇಂತಹ ಅಪರಾಧ ಮನಸ್ಥಿತಿಯ ಹಿಂದೆ ಸಾಧಾರಣವಾಗಿ ಮಹಿಳೆಯ ಮೇಲೆ ಮಾಲೀಕತ್ವವನ್ನು ಸಾಧಿಸುವ ಆಶಯವಿರುವುದಂತೂ ಸ್ಪಷ್ಟ. ಈ 21ನೇ ಶತಮಾನದಲ್ಲೂ 'ನ್ಯೂ ಏಜ್' ಮಹಿಳೆಯರು ಹೊಸ ಹೊಸ ಸಾಧನೆಯ ಶಿಖರಗಳನ್ನೇರುತ್ತಿದ್ದರೂ ಮಹಿಳೆಯನ್ನು ನಿಯಂತ್ರಿಸುವ ಮನಸ್ಥಿತಿ ಹಲ ಬಗೆಯ ಕಟ್ಟಳೆಗಳನ್ನು ಹೆಣೆಯುತ್ತಲೇ ಇರುತ್ತದೆ. 'ಮಹಿಳೆಗೆ ಒಳ್ಳೆಯದೇನು... ಕೆಟ್ಟದ್ದೇನು ಎಂಬುದು ಪುರುಷರಿಗೆ ಗೊತ್ತಿರುತ್ತದೆ. ಇದನ್ನೆಲ್ಲಾ  ಮಹಿಳೆ ಮೌನವಾಗಿ ಉಸಿರೆತ್ತದೆ ಪಾಲಿಸಬೇಕು. ಇಲ್ಲದಿದ್ದಲ್ಲಿ ಪರಿಣಾಮಗಳನ್ನು ಎದುರಿಸಬೇಕು' ಎಂಬಂತಹ ಕಟ್ಟಳೆ ಇದು. ಈಚಿನ ದಿನಗಳಲ್ಲಿ ವ್ಯಾಪಕವಾಗುತ್ತಿರುವ ಮರ್ಯಾದಾ ಹತ್ಯೆಗಳು, ಆ್ಯಸಿಡ್ ದಾಳಿ ಇವೆಲ್ಲದರ ಹಿಂದಿನ ಪ್ರೇರಣೆ ಒಂದೇ. ಪುರುಷಾಧಿಕಾರದ ಪ್ರತಿಪಾದನೆ, ಹೆಣ್ಣಿನ ಮೇಲೆ ಸಾಧಿಸ ಬಯಸುವ ಪೂರ್ಣ ನಿಯಂತ್ರಣ. ಹೀಗೆ ಸಾಮಾಜಿಕವಾಗಿ ಮಹಿಳೆ ಅಂಚಿಗೆ ಸರಿದಂತೇ ಇದು ಹೆಣ್ಣುಮಗುವಿನ ಅಪಮೌಲ್ಯೀಕರಣಕ್ಕೂ ನಾಂದಿಯಾಗುತ್ತಿದೆ. ಗಂಡು ಹೆಣ್ಣು ಸಮಾನವಾಗಿ ದುಡಿಯುತ್ತಿರುವ ಈ ಕಾಲದಲ್ಲೂ ವರದಕ್ಷಿಣೆ ಪಿಡುಗು ಹೆಚ್ಚುತ್ತಲೇ ಇದೆ. ಈ ಎಲ್ಲಾ ಬೆಳವಣಿಗೆಗಳು ಹೆಣ್ಣು ಮಗು ಹೊರೆ ಎನ್ನುವ ಭಾವನೆಯನ್ನು ಬಲಪಡಿಸಿ ಹೆಣ್ಣು ಭ್ರೂಣ ಹತ್ಯೆ ಪಿಡುಗಾಗಿ ಬೆಳೆಯುವುದಕ್ಕೆ ಕಾರಣವಾಗುತ್ತಿದೆ.

ಹಾಗಿದ್ದಲ್ಲಿ ಈ ಎಲ್ಲಾ ಬಗೆಯ ಪಿಡುಗಗಳಿಗೆ ತಡೆಯೇ ಇಲ್ಲವೆ? ಈಗಿರುವ ಪೊಲೀಸ್ ವ್ಯವಸ್ಥೆಯಲ್ಲಿ ಅನ್ಯಾಯ ಅಥವಾ ದೌರ್ಜನ್ಯಕ್ಕೊಳಗಾದ ಹೆಣ್ಣುಮಕ್ಕಳು ನ್ಯಾಯ ದೊರಕಿಸಿಕೊಳ್ಳುವುದು ಸಾಧ್ಯವಿದೆಯೆ? ಮಹಿಳಾ ವಿಚಾರಗಳ ಬಗ್ಗೆ ಪೊಲೀಸ್ ಇಲಾಖೆಯ ನಿಷ್ಕ್ರಿಯತೆಗೆ  ಪ್ರಿಯಾಂಕಾ ಪ್ರಕರಣದ ರಾದ್ಧಾಂತಕ್ಕಿಂತ ಸಾಕ್ಷಿ ಬೇಕೆ? ಇನ್ನು ಮಹಿಳೆಯರ ಅಳಲುಗಳನ್ನು ಕೇಳಿಸಿಕೊಳ್ಳಬೇಕಾದ ರಾಜ್ಯ ಮಹಿಳಾ ಆಯೋಗದ ಸದ್ದೇ ಇಲ್ಲ. ಆಯೋಗದ ಅಧ್ಯಕ್ಷರ ನೇಮಕಾತಿ ವಿಚಾರವನ್ನೇ ಸರ್ಕಾರ ಪೂರ್ಣ ಮರೆತುಬಿಟ್ಟಿದೆ. ನಮ್ಮ ರಾಜಕೀಯ ವ್ಯವಸ್ಥೆಯಂತೂ ಪೂರ್ಣ ಪುರುಷಮಯ ಎಂಬುದನ್ನೂ ಇತ್ತೀಚಿನ ರಾಜಕೀಯ ವಿದ್ಯಮಾನಗಳು ದೃಢ ಪಡಿಸಿವೆ. ಮಹಿಳೆಯರು ತಮ್ಮನ್ನು ತಾವು ಪ್ರತಿಪಾದಿಸಿಕೊಳ್ಳುವುದೇ ಪುರುಷ 'ಇಗೋ'ಗಳಿಗೆ ಅಸಹನೆಯ ವಿಚಾರವಾಗುತ್ತಿರುವುದು ದುರಂತ.

ಈ ಪುರುಷ ಪ್ರಾಧಾನ್ಯದ ಮಿಥ್ಯೆಯನ್ನು ಒಡೆಯುವುದಾದರೂ ಹೇಗೆ? ಬಾಲ್ಯದಲ್ಲೇ ಮಕ್ಕಳಲ್ಲಿ ಈ ಬಗ್ಗೆ ಅರಿವು ಮೂಡುವುದು ಅಗತ್ಯ. ಮಹಿಳೆಯರೆಂದರೇ ಎರಡನೇ ದರ್ಜೆ ಪ್ರಜೆ, ಆಕೆಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಎಂಬಂತಹ ಮೌಲ್ಯಗಳು ಕುಟುಂಬಗಳಲ್ಲಿ ಮರೆಯಾಗಿಲ್ಲ. ದುಡಿಯುವ ಮಹಿಳೆಗೂ ಮನೆಯಲ್ಲಿ ಸಮಾನ ಸ್ಥಾನಮಾನ ಇರುವುದಿಲ್ಲ. ಇವೆಲ್ಲಾ ಸಾಮಾಜಿಕ ಸಮಸ್ಯೆಗಳ ಲಕ್ಷಣ. ಹೀಗಾಗಿ  ಬರೀ ಕಾನೂನು ಅಥವಾ ಬಿಡಿ ಬಿಡಿಯಾದ ಪರಿಗಣನೆಗಳಿಂದ ಇದಕ್ಕೆ ಪರಿಹಾರ ಸಾಧ್ಯವಿಲ್ಲ. ಹೆಚ್ಚಿನ ಜಾಗೃತಿ, ಸೂಕ್ಷ್ಮತೆ, ಹೆಣ್ಣುಮಕ್ಕಳ ಘನತೆಯನ್ನು ಗೌರವಿಸುವಂತಹ ವಾತಾವರಣ ಸೃಷ್ಟಿಯಾಗಬೇಕು. ಈ ಬಗ್ಗೆ ಒಟ್ಟು ಸಮಾಜದಲ್ಲಿ  ಹೆಚ್ಚಿನ ಸಂವೇದನಾಶೀಲತೆ ಬೆಳೆಯಬೇಕಿದೆ. ಇದಕ್ಕೆ ಬೇಕು ಸಾಂಸ್ಕೃತಿಕ ಪರಿವರ್ತನೆ.

■ ಸಿ. ಜಿ. ಮಂಜುಳಾ

